ಜಿಲ್ಲಾ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿಂದಗಿ ಜಿ:ವಿಜಾಪುರ

ಕ್ರ.ಸಂ:ಆ2 ಖಾಸಗಿ ಪ್ರಾ.ಶಾಲೆ:ಅನುಮತಿ:2003-04 ದಿನಾಂಕ:2-6-2003

ಜ್ಞಾಪನಾ ಪತ್ರ

ವಿಷಯ: ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ (ರಿ) ಕಾಳಿಕಾನಗರ ಇವರ ವತಿಯಿಂದ ಕಿರಿಯ ಪ್ರಾಥಮಿಕ (1ನೇತರಗತಿಯಿಂದ 4)ಕನ್ನಡ ಮಾಧ್ಯಮವು ಸಿಂದಗಿಯಲ್ಲಿ ತೆರೆಯಲು ಅನುಮತಿ ಬಗ್ಗೆ.

ಉಲ್ಲೇಖ: 1) ಅಧ್ಯಕ್ಷರು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಕಾಳಿಕಾನಗರ ಸಿಂದಗಿ ಇವರಿಂದ ಪತ್ರ ಸಂಖ್ಯೆ: ದಿನಾಂಕ:20-3-2003

2) ಶಿಕ್ಷಣ ಸಂಯೋಜಕರು ಶಾಲೆ ತೆರೆಯುವ ಸ್ಥಳಕ್ಕೆ ಸಂದರ್ಶನ ನೀಡಿ ಸಲ್ಲಿಸಿದ ವರದಿ ಪತ್ರಕ್ಕೆ.

3) ಮಾನ್ಯ ನಿರ್ದೇಶಕರು (ಪ್ರಾ.ಶಿ) ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಅವರಪತ್ರ ಸಂಖ್ಯೆ:ಸಿ-7(7) ಪ್ರಾ.ಶಿ ಅ.ಇತರ-1 16-4-2003 ದಿನಾಂಕ:29-8-2002.

4) ಸರಕಾರಿ ಆದೇಶ ಸಂಖ್ಯೆ ಇಡಿ8 ಎಸ್.ಎಸ್ 2000 ದಿ:23-12-2000 ಹಾಗೂ

5) ಸರಕಾರಿ ಆದೇಶ ಸಂಖ್ಯೆ ಇಡಿ 44 ಡಿಬಿಸಿ 2002 ಬೆಂಗಳೂರು ದಿನಾಂಕ:

ಆದೇಶ

ಮೇಲೆ ಉಲ್ಲೇಖಿಸಿದ ವಿಷಯ ಹಾಗೂ ಮೇಲಿನ ಉಲ್ಲೇಖ ಸರಕಾರಿ ಆದೇಶ ಸಂಖ್ಯೆ 4,5 ರನ್ವಯ ಹಾಗೂ ಮೇಲಿನ ಉಲ್ಲೇಖ 1 ರ ಸಂಸ್ಥೆ ಯವರು ಸಲ್ಲಿಸಿದ ಮನವಿ ಪ್ರಸ್ತಾವನೆ ಮೇರೆಗೆ ಸಿಂದಗಿಯಲ್ಲಿ ವಿನಿಕೇತನ ಕಾಳಿಕಾನಗರ ಸಿಂದಗಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆ 1 ರಿಂದ 5ನೇತರಗತಿಯವರೆಗೆ (ಕನ್ನಡ ಮಾಧ್ಯಮದಲ್ಲಿ) ಸದ್ರಿ ಸಂಸ್ಥೆಯವರು ಸರ್ಕಾರಕ್ಕೆ ಆರ್ಥಿಕ ಹೊರೆ ಬೀಳದಂತೆ ನಿಯಮಾನುಸಾರ ಅರ್ಹತೆ ಹೊಂದಿದ ತರಬೇತಿ ಪಡೆದ ಶಿಕ್ಷಕರುಗಳಿಂದ ಬೋಧನಾ ಕಾರ್ಯಕ್ಕೆಗೊಂಡು ಸಂಸ್ಥೆ ತನ್ನದೇ ಆದ ಸಂಪನ್ಮೂಲಗಳಿಂದ ಶಾಲೆಯನ್ನು ನಡೆಯುಸಿಕೊಂಡು ಹಾಗೂ ಉತ್ತಮ ಕಟ್ಟಡ ಹಾಗೂ ಆಟದ ಮೈದಾನ, ಪಠೋಪಕರಣ, ಬೆಲೋಪಕರಣ ಇನ್ನಿತರ ಮೂಲ ಭೂತ ಸೌಲಭ್ಯಗಳನ್ನು ತಮ್ಮ ಸಂಸ್ಥೆಯಿಂದಲೇ ಪಡೆದುಕೊಂಡು ಶಾಲೆಯು ಶಾಶ್ವತ ಅನುದಾನ ರಹಿತವಾಗಿ 2003-04 ನೇ ಶೈಕ್ಷಣಿಕ ಸಾಲಿನಿಂದ ಶಿಕ್ಷಣ ಮಾಧ್ಯಮ 35 ರನ್ವಯ ಕನ್ನಡ ಮಾಧ್ಯಮದಲ್ಲಿ ತೆರೆಯಲು ಅನುಮತಿ ನೀಡಲಾಗಿದೆ.

ಜಿಲ್ಲಾ ಶಿಕ್ಷಣಾಧಿಕಾರಿಗಳು
ಸಿಂದಗಿ.

ಗೆ,

ಅಧ್ಯಕ್ಷರು, ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಕಾಳಿಕಾ ನಗರ ಸಿಂದಗಿ.

ಪ್ರತಿಗೌರವ ಪೂರ್ವಕವಾಗಿ,

ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಾಪುರ ಇವರಿಗೆ ಮಾಹಿತಿಗಾಗಿ.

ಅಧ್ಯಕ್ಷರು
ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ (ರಿ)
ಸಿಂದಗಿ-586 128. ಜಿ: ವಿಜಾಪುರ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿಂದಗಿ ಜಿ॥ ವಿಜಯಪುರ

ಸಂಖ್ಯೆ:ಜೆ6/ಪ್ರಾ.ಶಾ.ಮ/ಮಾನಕು/2016–17 ದಿನಾಂಕ : 29/11/2016

–: ಜ್ಞಾಪನ :–

ವಿಷಯ :– ವಿದ್ಯಾನಿಕೇತನ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಸಿಂದಗಿ ತಾ॥ ಸಿಂದಗಿ ಶಾಲೆಯ ಮಾನ್ಯತೆ ನವೀಕರಣ ಕುರಿತು.

ಉಲ್ಲೇಖ :– 1) ಕರ್ನಾಟಕ ಶಿಕ್ಷಣ ಮಸೂದೆ 1983 ಕಾಯ್ದೆ 1995–ನಿಯಮ 36:38
2) ಸರಕಾರದ ಸುತ್ತೋಲೆ ಸಂಖ್ಯೆ:ಇಡಿ:133:ವಿವಿಧ:2006 ದಿ: 02–11–2006
3) ಸರಕಾರದ ಸುತ್ತೋಲೆ ಸಂಖ್ಯೆ:ಇಡಿ:144:ಎಸ್.ಇ.ಪಿ:2006 ದಿ: 03–09–2007
4) ಸರಕಾರದ ಸುತ್ತೋಲೆ ಸಂಖ್ಯೆ:51:ಎಸ್.ಇ.ಪಿ:51:2008 ದಿ: 25–03–2008
5) ಸರಕಾರದ ಸುತ್ತೋಲೆ ಸಂಖ್ಯೆ:44:ಎಸ್.ಎಲ್.ಬಿ:29:2007
6) ಅಧ್ಯಕ್ಷರು/ಕಾರ್ಯದರ್ಶಿ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಸಿಂದಗಿ ತಾ॥ ಸಿಂದಗಿ ಜಿ॥ ವಿಜಯಪುರ ಇವರ ಪ್ರಸ್ತಾವನೆ ದಿನಾಂಕ : 26/11/2016
7) ಸಂದರ್ಶನಾಧಿಕಾರಿಗಳ ವರದಿ ದಿನಾಂಕ : 28/11/2016

–*–*–*–

ಮೇಲ್ಕಾಣಿಸಿದ ವಿಷಯದನ್ವಯ 1 ರಿಂದ 7 ರವರೆಗಿನ ಆದೇಶದನ್ವಯ ವಿದ್ಯಾನಿಕೇತನ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಸಿಂದಗಿ ತಾ॥ ಸಿಂದಗಿ ಈ ಶಾಲೆಯ ಮಾನ್ಯತೆ ನವೀಕರಣ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಗೆ ಕಾಣಿಸಿದ ವರ್ಗಗಳಿಗೆ 2009–10 ನೇ ಸಾಲಿನಿಂದ ಮಾನ್ಯತೆ ನವೀಕರಣ ಕೆಳಗಿನ ಷರತ್ತುಗಳೊಂದಿಗೆ ನೀಡಿದೆ.

ಅ. ನಂ	ಶಾಲೆಯ ಹೆಸರು	ಮಾನ್ಯತೆ ನೀಡಿರುವ ವರ್ಷ	ಮಾನ್ಯತೆ ನೀಡಿರುವ ವರ್ಗಗಳು ವಿಭಾಗಗಳು	ಶಾಲೆ ಸೇರಿದ ವರ್ಗ	ಪರಿಶೀಲನಾಧಿಕಾರಿಗಳ ಹೆಸರು ಮತ್ತು ಪದನಾಮ	ಮಾಧ್ಯಮ	ಷರಾ
1	ವಿದ್ಯಾನಿಕೇತನ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಸಿಂದಗಿ	2009–10 ರಿಂದ 2013–14 ರ ವರಗೆ ಅನುದಾನ ರಹಿತವಾಗಿ ಮಾನ್ಯತೆ ನವೀಕರಣ ನೀಡಿದೆ	1 ರಿಂದ 5ನೇ ತರಗತಿಗಾಗಿ	ಸಾಮಾನ್ಯ	ಶ್ರೀ ವ್ಹಿ ಎಸ್ ಪಾಟೀಲ ಶಿಕಣಸಂಯೋಜಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿಂದಗಿ	ಕನ್ನಡ	ಮಾನ್ಯತೆ ನವೀಕರಣ
2		2013–14 ನೇ ಸಾಲಿಗೆ 6 ನೆ ವರ್ಗಕ್ಕೆ	6 ನೇ ತರಗತಿಗಾಗಿ				ಪ್ರಥಮ ಮಾನ್ಯತೆ

ಷರತ್ತುಗಳು :

1) ಮೇಲೆ ವಿವರಿಸಿದ ವಿಭಾಗಗಳಿಗೆ 2009–10 ರಿಂದ 2013–14 ರವರಗೆ 1 ರಿಂದ 8 ನೇ ತರಗತಿಗಾಗಿ ಮಾನ್ಯತೆ ನವೀಕರಣ ನೀಡಲಾಗಿದೆ
2) ಮಾನ್ಯತೆ ನವೀಕರಣಕ್ಕಾಗಿ ತಪ್ಪು ಮಾಹಿತಿ ದಾಖಲೆಗಳನ್ನು ಸಲ್ಲಿಸಿದ್ದು ಕಂಡು ಬಂದಲ್ಲಿ ಸದರಿ ಮಾನ್ಯತೆ ರದ್ದು ಪಡಿಸುವ ಅಧಿಕಾರ ಈ ಕಛೇರಿಗೆ ಒಳಪಟ್ಟಿದೆ.
3) ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯಲ್ಲಿ ನಿಗದಿಪಡಿಸಿದಂತೆ ಶಾಲೆಗೆ ಅವಶ್ಯವಾದ ಕಟ್ಟಡ, ಆಟದ ಮೈದಾನ ಪಾಠೋಪಕರಣ, ಪೀಠೋಪಕರಣ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಪೂರೈಸತಕ್ಕದ್ದು.
4) ಸರಕಾರವು ನಿಗದಿಪಡಿಸಿದ ಮೊತ್ತಕ್ಕೆ ಸ್ಥಿರನಿಧಿಯಲ್ಲಿ ತೊಡಗಿಸುವುದು.
5) ಇಲಾಖೆಯ ಪೂರ್ವಾನುಮತಿ ಇಲ್ಲದೆ ಶಾಲೆಯಲ್ಲಿ ಹೆಚ್ಚಿನ ವಿಭಾಗಳನ್ನಾಗಲಿ ಮೇಲಿನ ವರ್ಗಗಳನ್ನಾಗಲಿ ಪ್ರಾರಂಭಿಸಕೂಡದು.
6) ಶಾಲೆಯಲ್ಲಿ ಪ್ರವೇಶ ಎಲ್ಲಾ ಜಾತಿಯ ಹಾಗೂ ಜನಾಂಗದ ಮಕ್ಕಳಿಗೆ ಮುಕ್ತವಾಗಿರಬೇಕು.
7) ಅನುದಾನ ಸಂಹಿತೆಯಲ್ಲಿಯ ನಿಯಮಗಳನ್ನು ಹಾಗೂ ಇಲಾಖೆಯಿಂದ ಕಾಲ–ಕಾಲಕ್ಕೆ ಹೊರಡಿಸಲಾದ ಆದೇಶಗಳನ್ನು ಪಾಲಿಸುವುದು.
9) ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಸಂರಕ್ಷಣೆಯ ಸಮೀತಿ ರಚಿಸುವುದು
10) ಶಾಲೆಯ ವಾಹನ ಇದ್ದಲ್ಲಿ ಈ ಕಛೇರಿಯಲ್ಲಿ ನೋಂದಾಯಿಸುವುದು.
11) ಮಕ್ಕಳ ಹಿತದೃಷ್ಟಿಯಿಂದ ಎಲ್ಲಾ ಮೂಲಭೂತ ಸೌಲಭ್ಯಗಳು ಪೂರೈಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಿಂದಗಿ.

ಗೆ,

1) ಅಧ್ಯಕ್ಷರು/ಕಾರ್ಯದರ್ಶಿ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಸಿಂದಗಿ ತಾ॥ ಸಿಂದಗಿ ಜಿ:ವಿಜಯಪೂರ
2) ಮುಖ್ಯ ಗುರುಗಳು ವಿದ್ಯಾನಿಕೇತನ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಸಿಂದಗಿ ತಾ॥ ಸಿಂದಗಿ
3) ಕಛೇರಿ ಪ್ರತಿ

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಾರ್ಯಾಲಯ ವಿಜಾಪೂರ

ಸಂಖ್ಯೆ::ಜಿ1:7276:ಖಾಪ್ರಾಶಾ:ಹೂ.ಶಾಲೆ.ಅನು:2012-13 ದಿನಾಂಕ 02-04-2013

ನಮೂನೆ-2

(ನಿಯಮ 3 ಉಪನಿಯಮ 5 (ಬಿ)

ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಸಿಂದಗಿ ತಾ: ಸಿಂದಗಿ ಜಿ: ವಿಜಾಪೂರ ಈ ಆಡಳಿತ ಮಂಡಳಿಯವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983(ಕರ್ನಾಟಕ ಆಕ್ಟ1-1995)ಸೆಕ್ಷನ್ 30-31 ರಂತೆ ಈ ದಿನ ದಿನಾಂಕ:02-4-2013 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಸಿಂದಗಿ ತಾಲುಕು ಬಂದಾಳ ರಸ್ತೆ ಗ್ರಾಮದ ಸರ್ವೆ ನಂಬರ್ ದಲ್ಲಿ ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1	ಕೆ.ಜಿ.ಎಸ್. ಸ್ವೀಕೃತಿ ರಸೀದಿ ಸಂಖ್ಯೆ ಹಾಗೂ ದಿನಾಂಕ	ಇಡಿ 099-00000-20638 ದಿನಾಂಕ:05-02-2013
2	ಕ್ರಮ ಸಂಖ್ಯೆ	೪೭೦/2013-14
3	ಪ್ರಾಥಮಿಕ ಶಾಲೆಯ ಹೆಸರು	ವಿದ್ಯಾನಿಕೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಬಂದಾಳ ರಸ್ತೆ ಸಿಂದಗಿ
4	ಶಿಕ್ಷಣ ಸಂಸ್ಥೆಯ ವರ್ಗೀಕರಣ	ಪ್ರಾಥಮಿಕ ಶಿಕ್ಷಣ(ಸಹ ಶಿಕ್ಷಣ)
5	ಅನುಮತಿ ನೀಡಿದ ತರಗತಿ	6ನೇ ತರಗತಿ :2013-14 ನೇ ಸಾಲಿನಲ್ಲಿ 7ನೇ ತರಗತಿ :2014-15 ನೇ ಸಾಲಿನಲ್ಲಿ 8ನೇ ತರಗತಿ :2015-16 ನೇ ಸಾಲಿನಲ್ಲಿ
6	ಅನುಮತಿ ನೀಡಿದ ಮಾಧ್ಯಮ	ಕನ್ನಡ ಮಾಧ್ಯಮ
7	ಶುಲ್ಕ ಪಾವತಿ ಮಾಡಿರುವುದು.	ರೂ.5000-00 ಪಾವತಿ ಮಾಡಿರುತ್ತಾರೆ. ಸ್ಟೇಟ ಬ್ಯಾಂಕ ಆಫ ಸಿಂದಗಿ ಡಿ.ಡಿ.ಸಂಖ್ಯೆ: 082173 ದಿನಾಂಕ 26-10-2012.

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಸಂ.೪೭೦ ಪುಟ ಸಂಖ್ಯೆ:೩೨ ವಾಲ್ಯೂಮ ಸಂಖ್ಯೆ:೦೧ ರಲ್ಲಿ ಈ ಕಚೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ಪಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

01. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು 1997 ರ ನಿಯಮ 3,4 ಮತ್ತು 5ಕ್ಕೆ ಒಳಪಟ್ಟಿರುತ್ತದೆ.
02. ಸರ್ಕಾರದ ಆದೇಶ ಸಂ:ಇಡಿ: 91:ಮಾಹಿತಿ:2012 ದಿನಾಂಕ:15-11-2012 ರಂತೆ ಈ ನೋಂದಣಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಹಾಗೂ ಸದರಿ ಆದೇಶದಡಿಯಲ್ಲಿ ಕಾಲಕಾಲಕ್ಕೆ ಶಾಲಾ ಶಿಕ್ಷಣ ಪದ್ಧತಿಯ ಬದಲಾವಣೆ ಕುರಿತು ರೂಪಿಸಲಾಗುವ ನಿಯಮಗಳನ್ನು ಪಾಲನೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.
03. ಸಂಸ್ಥೆಯು ಆಡಳಿತ ಮಂಡಳಿಯು ಮೇಲೆ ತಿಳಿಸಿದ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
04. ಶಾಲಾ ನಿವೇಶನ, ವಿದ್ಯುದ್ದೀಕರಣ,ಪೀಠೋಪಕರಣಗಳು,ಪಿಣ್ಣರ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
05. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಪೆಜ್ಜನ ವಿಭಾಗಗಳನ್ನು ತೆರೆಯುವಂತಿಲ್ಲ.

ಅಧ್ಯಕ್ಷರು
ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ(ರಿ).
ಸಿಂದಗಿ-586 128. ಜಿ: ವಿಜಾಪೂರ.

06. **ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೇ ನಂಬರ್‌ನಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**

07. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.

08. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ1-1995)ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

09. ಈ ಪ್ರಾಥಮಿಕ ಶಾಲೆ ನೋಂದಣಿಯಂತೆ ಸರ್ಕಾರಿ ಆಧಿಸೂಚನೆ ಸಂ:ಇಡಿ:175:ಪಿಎಂಸಿ:95: ದಿನಾಂಕ: 7-9-98 ಮತ್ತು ದಿನಾಂಕ:29-12-98 ರ ಪ್ರಕಾರ **ಶಾಶ್ವತ ಅನುದಾನರಹಿತವಾಗಿರುತ್ತದೆ.**

10. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.20.00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

11. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.

12. ಸರ್ಕಾರಿ ಆದೇಶ ಸಂ:ಇಡಿ:28 ಟಿಜಿಸಿ94:ದಿನಾಂಕ:29-4-94 ರಂತೆ 1 ರಿಂದ 5 ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸುವದು ಹಾಗೂ ಭಾಷಾ ನೀತಿಗೆ ಒಳಪಟ್ಟು ನೋಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ/ಇಲಾಖೆಯ/ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ, ನಿಯಮಗಳನ್ವಯ ಸದರಿ ಶಾಲೆಯ ಅನುಮತಿ ಮತ್ತು ನೋಂದಣಿಯನ್ನು ರದ್ದುಪಡಿಸಲಾಗುವುದು.

13. ಭಾಷಾ ನೀತಿ ಉಲ್ಲಂಘನೆ ಮಾಡಿದ ಶಾಲೆಗಳು ಸ್ವ ಇಚ್ಛೆ ಯೋಜನೆಯಡಿ ಅವಕಾಶ ಹೊಂದಿದ ಶಾಲೆಗಳು ನಾಯಾಲಯದ ಆದೇಶ ಮತ್ತು ಸರ್ಕಾರದ ಆದೇಶ ಮಾರ್ಪಡಿಸಿದಲ್ಲಿ ಆ ಪರತ್ತಿಗೆ ಒಳಪಟ್ಟಿರುತ್ತವೆ.

14. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

15. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.

16. ಕರ್ನಾಟಕ ಶಿಕ್ಷಣ ಮಸೂದೆ ಅಡಿಯಲ್ಲಿ 8 ಆಡಿಯಲ್ಲಿ ಉಪಬಂಧ 36-39 ರಂತೆ ನೋಂದಾಯಿಸಿದ ಎಲ್ಲ ಶಾಲೆಗಳು ರಕಗ್ನಿಷನ್ ಹಾಗೂ ಪ್ರಾವಿಜನಲ್ ರೆಕಗ್ನಿಷನ್ ಪ್ರಮಾಪತ್ರಕ್ಕೆ ಬದ್ಧವಾಗಿರತಕ್ಕದ್ದು.

17. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

18. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

19. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಆರ್ಥಿಕ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಯಾವುದೇ ಪರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗಿಯೇ ರದ್ದಾಗುವುದು.

20. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

ಅಧ್ಯಕ್ಷರು
ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ(ರಿ).
ಪಿನ-586 128. ಜಿ|| ವಿಜಾಪೂರ.

21. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ ಬೆಂಕಿ, ಬಿರುಗಾಳಿ ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗದುಕೊಳ್ಳಬೇಕು.
22. ಶಾಲೆಗಳಲ್ಲಿ ಅಗ್ನಿಶಾಮಕ ಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವುದು.
23. ಸಿಬ್ಬಂದಿ ಮಾದರಿ ರಚನೆಯ ಪ್ರಕಾರ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರಾಥಮಿಕ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು)ನಿಯಮಗಳು 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.
24. ಸರ್ಕಾರದ ಆದೇಶ ಸಂ:ಇಡಿ:104:ಎಸ್ಇಪಿ:2005 ದಿನಾಂಕ:12–1–2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು. ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಟ ವೇತನ ರೂ.12500ವನ್ನು ಬ್ಯಾಂಕ ಮೂಲಕ ಪಾವತಿಸತಕ್ಕದ್ದು.
25. ಸರ್ಕಾರದ ಆದೇಶ ಸಂ:ಇಡಿ:104:ಎಸ್ ಇಪಿ2005 ದಿನಾಂಕ:12–1–2006ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.
26. ಆಯುಕ್ತರು ಸಾ.ಶಿ.ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂ:ಸಿ7(2)ಪ್ರಾಶಿಅ:ಹೊಶಾಪ್ರಾ:ಅನು:1:2011:–12:ದಿನಾಂಕ:3–5–2012 ರಂತೆ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ 1 ರಿಂದ 5 ನೇ ತರಗತಿಯ ಪ್ರಾಥಮಿಕ ಶಾಲೆಗಳಲ್ಲಿ ಪಿಯುಸಿ ಟಿಸಿಎಚ್/ಡಿಇಡಿ ವಿದ್ಯಾರ್ಹತೆಯ ಶಿಕ್ಷಕರನ್ನು ಹಾಗೂ 6,7,8 ನೇ ತರಗತಿಗಳಿಗೆ ತರಬೇತಿ ಹೊಂದಿದ ಪದವೀಧರ ಶಿಕ್ಷಕರನ್ನು(ಟಿಜಿಟಿ) ಕಡ್ಡಾಯವಾಗಿ ನೇಮಕ ಮಾಡತಕ್ಕದಕ್ಕದ್ದು.(ಬಿಎ,ಬಿಇಡಿ/ಬಿಎಸ್.ಸಿ, ಬಿಇಡಿ)
27. ನಿಯಮಾನುಸಾರ ಕನ್ನಡ ಮಾಧ್ಯಮಯಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದಲ್ಲಿ ಮಾತ್ರ ಶಾಲೆಯನ್ನು ಪ್ರಾರಂಭಿಸತಕ್ಕದ್ದು.
28. ಈ ಶಾಲಾ ನೋಂದಣಿಯನ್ನು 2013–14 ನೇ ಸಾಲಿಗೆ 6 ನೇ ತರಗತಿ ಕನ್ನಡ ಮಾಧ್ಯಮದಲ್ಲಿ ಪ್ರಾರಂಭಿಸಲು ನೊಂದಾಯಿಸಿರುವುದರಿಂದ 7 ನೇ ತರಗತಿಯನ್ನು 2014–15 ನೇ ಸಾಲಿನಿಂದ 8 ನೇ ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಆಧಾರದ ಮೇಲೆ 2015–16 ನೇ ಸಾಲಿನಿಂದ ಪ್ರಾರಂಭಿಸತಕ್ಕದ್ದು.
29. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.
30. ಪ್ರಾರಂಭಿಸಲು ಉದ್ದೇಶಿಸಿರುವ ಶಾಲೆಯು ಮಾಡಿಗೆ ಕಟ್ಟಡ ಹೊಂದಿದ್ದಲ್ಲಿ, ಶಾಲೆ ಪ್ರಾರಂಭಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪಡೆದ ನಂತರ ಶಾಲೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವುದು
31. ಆಡಳಿತ ಮಂಡಳಿಯು ಕನಿಷ್ಟ ರೂ. 5 ಲಕ್ಷ ಗಾಡಾ ತೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಶಾಶ್ವತವಾಗಿ ಹೊಂದಿರತಕ್ಕದ್ದು.
32. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.

ಅಧ್ಯಕ್ಷರು
ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ(ರಿ).
ಸಿಂದಗಿ-586 128. ಜಿ। ವಿಜಾಪುರ

33. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
34. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಿಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.
35. ಶಾಲಾ ಕಟ್ಟಡವು ಪರೀಕ್ಷೆಗಳು ತರಬೇತಿ ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.
36. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ) ನಿಯಮಗಳು 1995 ರಲ್ಲಿ ತಿಳಿಸಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.
37. ಈ ಎಲ್ಲಾ ನಿಬಂಧನೆಗಳನ್ನು 2 ತಿಂಗಳೊಳಗಾಗಿ ಪೂರೈಸಿ ಪ್ರಥಮ ಮಾನ್ಯತೆ ಕುರಿತು ಅರ್ಜಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
38. ಸದರಿ ಶಾಲೆಯಲ್ಲಿ ಕನ್ನಡ ಮಾಧ್ಯಮದ 6 ಮತ್ತು 7 ನೇ ತರಗತಿಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ನಡೆಸುವ ಕರಾರುಗಳಿಗೆ ಒಳಪಟ್ಟು ಈ ಶಾಲೆಗೆ ಅನುಮತಿಯನ್ನು ನೀಡಿದೆ.
39. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಾಪೂರ

ಗೆ

1.ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಿಂದಗಿ
2.ಅಧ್ಯಕ್ಷರು/ಕಾರ್ಯದರ್ಶಿಗಳು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ ಸಿಂದಗಿ ತಾ: ಸಿಂದಗಿ ಜಿ: ವಿಜಾಪೂರ
3.ಕಚೇರಿ ಪ್ರತಿ

ಅಧ್ಯಕ್ಷರು
ವಿದ್ಯಾನಿಕೇತನ ಶಿಕ್ಷಣ ಸಂಸ್ಥೆ (ರಿ).
ಸಿಂದಗಿ-586 128. ಜಿ। ವಿಜಾಪುರ.